ಅ ಮತ್ತು ಆ) ಈ ಪ್ರಸ್ತಾವನೆ ಪ್ರಾಥಮಿಕ ತನಿಖಾ ವರದಿ ತಯಾರಿಕಾ ಹಂತದಲ್ಲಿದೆ.

ಇ) ಉದ್ಭವಿಸುವುದಿಲ್ಲ.

ರಾಣಿಬೆನ್ನೂರು ತಾಲ್ಲೂಕಿನಲ್ಲಿ ಹರಿಯುವ ಕುಮದ್ವತಿ ನದಿಗೆ ಬ್ರಿಡ್ಜ್ ಕಂ ಬ್ಯಾರೇಜ್ ಕಟ್ಟುವುದು.

1650(2194)

ಶ್ರೀ ಕೋಳಿವಾಡ ಕೃಷ್ಣಪ್ಪ ಭೀಮಪ್ಪ (ರಾಣಿಬೆನ್ನೂರು): ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಣಿಬೆನ್ನೂರು ತಾಲ್ಲೂಕಿನಲ್ಲಿ ಹರಿಯುವ ಕುಮದ್ವತಿ ನದಿಗೆ ಕುಪ್ಪೇಲೂರು ಹತ್ತಿರ ಹಾಗೂ ಮುಷ್ಟೂರು ಗ್ರಾಮದ ಹತ್ತಿರ ಅಡ್ಡಗೋಡೆ ಕಟ್ಟುವ (ಬ್ರಿಡ್ಜ್ ಕಂ ಬ್ಯಾರೇಜ್) ಪ್ರಸ್ತಾವನೆಯು ಸರ್ಕಾರಕ್ಕೆ ಬಂದಿದೆಯೇ;

ಆ) ಪ್ರಸ್ತಾವನೆ ಬಂದಿದ್ದರೆ ಯಾವ ಹಂತದಲ್ಲಿದೆ;

ಇ) 2001-2002ನೇ ಸಾಲಿನಲ್ಲಿ ಇವುಗಳನ್ನು ಮಂಜೂರು ಮಾಡಲಾಗುವುದೇ?

ಶ್ರೀ ಕುಮಾರ್ ಬಂಗಾರಪ್ಪ (ಸಣ್ಣ ನೀರಾವರಿ ರಾಜ್ಯ ಸಚಿವರು):

ಅ ಮತ್ತು ಆ) ಈ ಪ್ರಸ್ತಾವನೆ ಪ್ರಾಥಮಿಕ ತನಿಖಾ ವರದಿ ತಯಾರಿಕೆ ಹಂತದಲ್ಲಿದೆ.

ಇ) ತಾಂತ್ರಿಕ ಶಕ್ಯತೆ, ಅನುದಾನ ಲಭ್ಯತೆ ಆಧರಿಸಿ ನಿರ್ಧರಿಸಲಾಗುವುದು.

ಜಲಸಂವರ್ಧನೆ ಯೋಜನೆಗೆ ಕೇಂದ್ರ ಸರ್ಕಾರದ ಅನುಮತಿ ದೊರಕದಿರುವುದು.

1651(1800)

ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ): ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೆರೆಯ ಹೂಳೆತ್ತಲು ಸರ್ಕಾರ ರೂಪಿಸಿರುವ ಜಲಸಂವರ್ಧನೆ ಯೋಜನೆಗೆ ವಿಶ್ವ ಬ್ಯಾಂಕಿನಿಂದ ಎಷ್ಟು ಧನಸಹಾಯ ನೆರವನ್ನು ಕೋರಲಾಗಿದೆ ಹಾಗೂ ವಿಶ್ವಬ್ಯಾಂಕ್

ಎಷ್ಟು ನೆರವನ್ನು ಕೊಡಲು ಒಪ್ಪಿದೆ.

ಆ) ರಾಜ್ಯ ಸರ್ಕಾರ ವಿಶ್ವ ಬ್ಯಾಂಕ್‌ನಿಂದ ಹಣ ಬಿಡುಗಡೆ ಮಾಡಲು ಕೇಳಿದಾಗ, ವಿಶ್ವ ಬ್ಯಾಂಕ್ ಕೇಂದ್ರ ಜಲಸಂಪನ್ಮೂಲ ಅಭಿವೃದ್ಧಿ ಸಂಸ್ಥೆಯ ಅನುಮತಿ ಇದ್ದರೆ ಮಾತ್ರ ಸಾಲ ಕೊಡಲಾಗುವುದೆಂದು ಷರತ್ತು ಹಾಕಿರುವುದು ನಿಜವೇ;

ಇ) ಪ್ರಸ್ತುತ ಕೇಂದ್ರ ಸಂಪನ್ಮೂಲ ಆಯೋಗ ರಾಜ್ಯ ಸರ್ಕಾರಕ್ಕೆ ಕಾವೇರಿ ಕೊಳ್ಳದಲ್ಲಿ ಕೆರೆ ನೀರಿನ ಸಂಗ್ರಹದ ಶಕ್ತಿ ಹೆಚ್ಚಿಸಲು ಹೂಳು ತೆಗೆಯುವುದಕ್ಕೆ ತನ್ನ ಅನುಮತಿ ಕೇಳಬೇಕೆಂದು ರಾಜ್ಯ ಸರ್ಕಾರಕ್ಕೆ ತಿಳಿಸಿರುವುದು ನಿಜವೇ.

ಈ) ವಿಶ್ವಬ್ಯಾಂಕಿನ ನೆರವು ಪಡೆದು ರಾಜ್ಯದ ಎಷ್ಟು ಕೆರೆಗಳ ಹೂಳನ್ನು ತೆಗೆಯಬೇಕೆಂದು ನಿರ್ಧರಿಸಲಾಗಿದೆ. ಜಿಲ್ಲಾವಾರು ಮಾಹಿತಿ ನೀಡುವುದು. ಹಾಗೂ ಈ ಕೆಲಸಕ್ಕೆ ಎಷ್ಟು ವೆಚ್ಚ ತಗಲುವುದು.

ಉ) ವಿಶ್ವಬ್ಯಾಂಕಿನಿಂದ ನೆರವು ಪಡೆದು ಬೆಳಗಾಂವ ಜಿಲ್ಲೆಯಲ್ಲಿ ಎಷ್ಟು ಕೆರೆಗಳ ಹೂಳನ್ನು ತೆಗೆಯಲು ನಿರ್ಧರಿಸಲಾಗಿದೆ; ತಾಲ್ಲೂಕುವಾರು ವಿವರ ನೀಡುವುದು.

ಊ) ಬೆಳಗಾಂ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ಸಿದ್ಧಸಮುದ್ರ ಕೆರೆ ಹಾಗೂ ಸವದತ್ತಿ ತಾಲ್ಲೂಕಿನ ಹಿರೇಕೊಪ್ಪ, ಮಳಗಲಿ, ಹಿರೇಬೂದನೂರ ಕೆರೆಗಳ ಹೂಳನ್ನು ತೆಗೆಯಲು ಯಾವ ಕ್ರಮ ಕೈಗೊಳ್ಳಲಾಗುವುದು?

ಶ್ರೀ ಎಸ್.ಎಂ.ಕೃಷ್ಣ (ಮುಖ್ಯಮಂತ್ರಿಗಳು):

ಆ) 995.0 ಕೋಟಿ ರೂಪಾಯಿಗಳನ್ನು ಕೋರಿ ಪ್ರಸ್ತಾಪಿಸಲಾಗಿದೆ. ವಿಶ್ವಬ್ಯಾಂಕಿನೊಂದಿಗೆ ಪ್ರಸ್ತಾಪಿಸಲಾಗಿದೆ. ವಿಶ್ವಬ್ಯಾಂಕಿನೊಂದಿಗೆ ಡಿಸೆಂಬರ್ 2001ರ ಚರ್ಚೆಯ ಸಮಯದಲ್ಲಿ ವಿಶ್ವಬ್ಯಾಂಕ್ ಎಷ್ಟು ಹಣ ನೀಡುತ್ತದೆಂಬುದು ಗೊತ್ತಾಗುತ್ತದೆ.

ಆ) ರಾಜ್ಯದ ಅಭಿವೃದ್ಧಿ ಕಾಮಗಾರಿಗೆ ಸಂಬಂಧಪಟ್ಟ ಎಲ್ಲಾ ಪ್ರಸ್ತಾವನೆಗಳು ವಿಶ್ವಬ್ಯಾಂಕಿಗೆ ಕೇಂದ್ರ ಸರ್ಕಾರದ ಸಂಬಂಧಿಸಿದ ಇಲಾಖೆಯ ಮೂಲಕವೇ ಹೋಗಬೇಕಾಗಿರುತ್ತದೆ.

ಇ) ಕೇಂದ್ರ ಸಂದನ್ಮೂಲ ಆಯೋಗದಿಂದ ಈ ರೀತಿಯ ಯಾವುದೇ ಪತ್ರ ಬಂದಿರುವುದಿಲ್ಲ. ಆದರೆ, ಈ ರೀತಿ ಸಲಹೆ ಕೇಂದ್ರ ಸರ್ಕಾರದ ಆರ್ಥಿಕ ಮತ್ತು ಜಲ ಸಂಸಾಧನ ಮಂತ್ರಾಲಯಗಳಿಂದ ಬಂದಿರುತ್ತದೆ.

ಈ) ಮತ್ತು ಉ) ಊ) ಇನ್ನೂ ನಿರ್ಧರಿಸಿರುವುದಿಲ್ಲ.